

بِسۡمِ اللّٰہِ الرَّحۡمٰنِ الرَّحِیۡمِ

# ಯು.ಕೆ. ಜಲ್ಸಾಲಾನ – 2017

(ಅಹ್ಮದಿಯಾ ಮುಸ್ಲಿಮ್ ಜಮಾಅತ್‌ನ ಐದನೇ ಖಲೀಫ, **ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್**, ಅವರು ಲಂಡನಿನ **'ಹದೀಖತುಲ್ ಮಹ್‌ದಿ'**ಯಿಂದ 28-07-2017 ರಂದು ನೀಡಿದ **ಜುಮುಅ ಖುತ್‌ಬದ ಸಾರಾಂಶ**)

*(ತಶಹ್ಹುದ್, ತಅವ್ವುದ್ ಮತ್ತು ಸೂರತುಲ್ ಫಾತಿಹ ಪಠಿಸಿದ ನಂತರ) ಹಝ್ರತ್ ಖಲೀಫತುಲ್ ಮಸೀಹ್ ಖಾಮಿಸ್ ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್ ಹೀಗೆ ಹೇಳಿದರು:*

ಅಲ್ಲಾಹನ ಅನುಗ್ರಹದಿಂದ ಇಂದಿನಿಂದ ಯು.ಕೆ. ಜಲ್ಸ ಸಾಲಾನ ಪ್ರಾರಂಭವಾಗುತ್ತಿದೆ. ಈ ದಿನಗಳಲ್ಲಿ ಬಹಳ ಹೆಚ್ಚು ಪ್ರಾರ್ಥಿಸಿರಿ. ಯಾರಿಗೆ ಸಾಧ್ಯವಿದೆಯೋ ಅವರು ಸದಖ ಸಹ ನೀಡಬೇಕು. ಅಲ್ಲಾಹನು ಈ ಜಲ್ಸವನ್ನು ಪ್ರತಿಯೊಂದು ರೀತಿಯಲ್ಲಿ ಯಶಸ್ವಿಯನ್ನಾಗಿಯೂ ಅನುಗ್ರಹಭರಿತವನ್ನಾಗಿಯೂ ಮಾಡಲಿ. ಈ ಜಲ್ಸಕ್ಕೆ ಬಂದು ಸೇರಿದವರು ಮತ್ತು ಎಂ.ಟಿ.ಎ. ಮೂಲಕ ಜಲ್ಸದ ಕಾರ್ಯಕ್ರಮಗಳನ್ನು ಆಲಿಸುತ್ತಾ ಇರುವ ಲೋಕದ ವಿವಿಧ ದೇಶಗಳಲ್ಲಿರುವ ಅಹ್ಮದಿಯರು ಈ ಜಲ್ಸ ಎಲ್ಲ ವಿಧಗಳಲ್ಲಿಯೂ ಜಯಶಾಲಿಯಾಗಲು ಮತ್ತು ಶತ್ರುಗಳ ಪ್ರತಿಯೊಂದು ಕೆಡುಕಿನಿಂದ ಸುರಕ್ಷಿತವಾಗಿರಲು ಪ್ರಾರ್ಥಿಸುತ್ತಾ ಇರಬೇಕು. ನಾನು ಕಳೆದ ವಾರದ ಖುತ್‌ಬದಲ್ಲಿ ಅತಿಥಿಗಳ ಸತ್ಕಾರ ವ್ಯವಸ್ಥೆ ನಿರ್ವಹಿಸುತ್ತಿರುವ ಕಾರ್ಯಕರ್ತರು ಅತಿಥಿ ಸತ್ಕಾರ ಮಾಡಬೇಕಾದ ರೀತಿಯ ಬಗ್ಗೆ ವಿವರಿಸಿದ್ದೆನು. ಇಂದು ನಾನು ಸಂಕ್ಷಿಪ್ತವಾಗಿ ಅತಿಥಿಗಳ ಗಮನವನ್ನು ಈ ವಿಷಯದ ಕಡೆಗೆ ಹರಿಸಲು ಬಯಸುತ್ತೇನೆ. ಅವರಿಗೆ ಸಹ ಕೆಲವು ಹೊಣೆಗಾರಿಕೆಗಳಿವೆ. ಅವುಗಳನ್ನು ಅವರು ಈಡೇರಿಸಬೇಕಾಗಿದೆ. ನಿಶ್ಚಯವಾಗಿಯೂ ಇಸ್ಲಾಮ್‌ನಲ್ಲಿ ಅತಿಥಿಗಳಿಗೆ ಹಲವು ಹಕ್ಕುಗಳನ್ನು ನೀಡಲಾಗಿವೆ. ಆದರೆ ಇಸ್ಲಾಮ್ ಧರ್ಮ ಸಂತುಲಿತ ಉಪದೇಶಗಳನ್ನು ನೀಡುವ ಧರ್ಮವಾಗಿದೆ. ಅದು ಕೇವಲ ಒಂದು ಪಕ್ಷದವರ ಕಡೆಗೆ ಮಾತ್ರ ಗಮನ ಹರಿಸಿ ಅವರ ಹೊಣೆಗಾರಿಕೆಗಳ ಬಗ್ಗೆ ಮಾತ್ರ ಉಪದೇಶಿಸುವ ಧರ್ಮವಲ್ಲ. ಅದು ಇನ್ನೊಂದು ಪಕ್ಷದವರೊಂದಿಗೆ ಸಹ ಹೇಳುತ್ತದೆ, ನಿಮ್ಮ ಮೇಲೆ ಸಹ ಕೆಲವು ಹೊಣೆಗಾರಿಕೆಗಳು ಇವೆ ಎಂದು. ಅವುಗಳನ್ನು ಈಡೇರಿಸುವುದು ನಿಮಗೆ ಕಡ್ಡಾಯವಾಗಿದೆ ಎಂದು ಹೇಳುತ್ತದೆ. ಇವುಗಳ ಮೂಲಕವೇ ಪ್ರೀತಿ, ಭ್ರಾತೃತ್ವ ಮತ್ತು ವಾತ್ಸಲ್ಯಭರಿತ ಸಮಾಜ ಸ್ಥಾಪಿತವಾಗುವುದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಒಂದು ವರ್ಷ ತಮ್ಮ ಅತೃಪ್ತಿಯನ್ನು ಪ್ರಕಟಿಸುತ್ತಾ ಆ ವರ್ಷ ಜಲ್ಸವನ್ನು ಜರಗಿಸಿರಲಿಲ್ಲ. ಅದಕ್ಕೆ ಕಾರಣ ಜಲ್ಸಕ್ಕೆ ಆಗಮಿಸಿದವರ ತಪ್ಪಾದ ಕೆಲವು ನಡೆವಳಿಕೆಗಳಾಗಿತ್ತು. ಎಂದರೆ ಜಲ್ಸಕ್ಕೆ ಆಗಮಿಸಿದ ಅತಿಥಿಗಳು ತಮ್ಮ ಕರ್ತವ್ಯಗಳನ್ನು ಈಡೇರಿಸದ ಕಾರಣ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ದುಃಖಭರಿತರೂ ಅತೃಪ್ತರೂ ಆಗಿದ್ದರು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರು ತಮ್ಮ ಅತೃಪ್ತಿಯನ್ನು ಪ್ರಕಟಿಸಲು ಕಾರಣ, ಅತಿಥಿಗಳಿಂದ ಅವರಿಗೆ ನೇರವಾಗಿ ಯಾವುದೇ ಕಷ್ಟವುಂಟಾದುದರಿಂದಲ್ಲ. ಅವರು ಅತಿಥಿಗಳೊಂದಿಗೆ ಹೀಗೆ ಹೇಳಿದರು: ಜಲ್ಸಕ್ಕೆ ಭಾಗವಹಿಸಲು ಆಗಮಿಸಿದ ನೀವು ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸುವುದಿಲ್ಲ. ಅಷ್ಟು ಮಾತ್ರವಲ್ಲ ನೀವು ಸ್ವಾರ್ಥ ಭಾವನೆಯಿಂದಲೂ ಸ್ವಂತ ಇಷ್ಟ ಪ್ರಕಾರವೂ ವರ್ತಿಸುವವರಾಗಿರುವಿರಿ. ನೀವು ನಿಮ್ಮ ಸುಖಕ್ಕೆ ಅನ್ಯರ ಸುಖದ ಮೇಲೆ ಆದ್ಯತೆ ನೀಡುತ್ತೀರಿ. ನೀವು ಜಲ್ಸವನ್ನು ಒಂದು ಲೌಕಿಕ ಜಾತ್ರೆಯ ಹಾಗೆ ಭಾವಿಸುತ್ತಿರುವಿರಿ. ಜಲ್ಸಕ್ಕೆ ಆಗಮಿಸುವ ನಿಜವಾದ ಉದ್ದೇಶ ತಕ್ವದಲ್ಲಿ ಅಭಿವೃದ್ಧಿ ಹೊಂದುವುದಾಗಿದೆ. ಅಲ್ಲಾಹನೊಂದಿಗೆ ತಮ್ಮ ಸಂಬಂಧವನ್ನು ವರ್ಧಿಸುವುದು, ಪರಸ್ಪರ ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸುವುದು, ಒಬ್ಬರಿನ್ನೊಬ್ಬರಿಗೋಸ್ಕರ ತ್ಯಾಗದ ಭಾವನೆಯ ಮಟ್ಟವನ್ನು ವರ್ಧಿಸುವುದು ಜಲ್ಸದ ಉದ್ದೇಶವಾಗಿದೆ. ಕೆಲವು ಜನರು ಈ ಉದ್ದೇಶಲಕ್ಷ್ಯವನ್ನು ಈಡೇರಿಸುವುದಿಲ್ಲ ಎಂದು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರಿಗೆ ತಿಳಿದಾಗ ಅವರಿಗೆ ಬಹಳ ದುಃಖವುಂಟಾಯಿತು. ಅವರು ಅದನ್ನು ಬಹಳ ಸ್ಪಷ್ಟವಾಗಿ ಪ್ರಕಟಪಡಿಸಿದರು.

ಆದುದರಿಂದ ಜಲ್ಸಕ್ಕೆ ಆಗಮಿಸುವವರು ಕೇವಲ ಅತಿಥಿಗಳು ಮಾತ್ರವಾಗಿರುವುದಿಲ್ಲ. ಅವರು ಕೇವಲ ತಮ್ಮ ಸುಖ ಸೌಲಭ್ಯಗಳನ್ನು ಮಾತ್ರ ಆಶಿಸಿದರೆ ಸಾಕಾಗಲಾರದು. ಅವರು ತ್ಯಾಗ ಮಾಡುವ ಉನ್ನತ ಮಟ್ಟವನ್ನು ಸಹ ಗಳಿಸುವವರಾಗಬೇಕು. ಜಲ್ಸದ ಉದ್ದೇಶವನ್ನು ಅವರು ಯಾವಾಗಲೂ ತಮ್ಮ ಮುಂದೆ ಇರಿಸಬೇಕು. ನಾನು ಹೇಳಿದ ಹಾಗೆ ಅವರು ಅಲ್ಲಾಹನೊಂದಿಗೆ ಸಂಬಂಧ ಸ್ಥಾಪಿಸುವವರೂ ಆಧ್ಯಾತ್ಮಿಕತೆಯಲ್ಲಿ ಅಭಿವೃದ್ಧಿ ಗಳಿಸುವವರೂ ಆಗಬೇಕು. ಒಬ್ಬರಿನ್ನೊಬ್ಬರ ಹಕ್ಕುಗಳನ್ನು ಈಡೇರಿಸಿ ಕೊಡುವವರಾಗಬೇಕು. ಜಮಾಅತಿಗೆ ಸೇರಿರದ ಅತಿಥಿಗಳ ಬಗ್ಗೆ ನಿಶ್ಚಯವಾಗಿಯೂ ನಾವು ಬಹಳ ಶ್ರದ್ಧೆ ವಹಿಸಬೇಕು. ನಮ್ಮ ಸಂಪನ್ಮೂಲಗಳಿಗೆ ಅನುಸಾರವಾಗಿ ಗರಿಷ್ಟ ರೀತಿಯಲ್ಲಿ ನಾವು ಅವರಿಗೆ ಅತಿಥಿ ಸತ್ಕಾರ ನೀಡಬೇಕು. ಕೆಲವು ಜನಾಂಗಗಳ ನಾಯಕರು ಸಹ ಆಗಮಿಸಿದ್ದಾರೆ. ಅವರ ಅತಿಥಿ ಸತ್ಕಾರದ ಬಗ್ಗೆ ವಿಶಿಷ್ಟ ಗಮನ ಹರಿಸಬೇಕು. ಏಕೆಂದರೆ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಹೇಳಿದ್ದಾರೆ: ಜನಾಂಗಗಳ ನಾಯಕರು ನಿಮ್ಮ ಬಳಿಗೆ ಆಗಮಿಸಿದಾಗ ಅವರನ್ನು ಗೌರವಿಸಿರಿ. ಮತ್ತು ಅವರಿಗೆ ಯೋಗ್ಯವಾದ ರೀತಿಯಲ್ಲಿ ಸತ್ಕಾರ ನೀಡಿರಿ ಎಂದು.

ಅದೇ ರೀತಿ ಹಲವು ಜನರು ಸತ್ಯಾನ್ವೇಷಿಗಳಾಗಿ ಆಗಮಿಸುತ್ತಿದ್ದಾರೆ. ಅವರು ಯಾರೇ ಆಗಿರಲಿ ಅವರನ್ನು ಪೂರ್ಣ ರೀತಿಯಲ್ಲಿ ಸತ್ಕರಿಸಬೇಕು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಇದೇ ವಿಷಯ ಮನವರಿಕೆ ಮಾಡಿಕೊಟ್ಟಿದ್ದಾರೆ. ಅವರು ತಮ್ಮ ಲಂಗರ್

ಕಾರ್ಯಕರ್ತರೊಂದಿಗೆ ಹೀಗೆ ಹೇಳಿದ್ದರು: ನಿಮಗೆ ಅತಿಥಿ ಬಗ್ಗೆ ತಿಳಿದಿದ್ದರೂ ತಿಳಿದಿರದಿದ್ದರೂ, ಅತಿಥಿ ಬಡವನಾಗಿದ್ದರೂ ಶ್ರೀಮಂತನಾಗಿದ್ದರೂ ನೀವು ಪ್ರತಿಯೊಬ್ಬನಿಗೆ ಅತಿಥಿ ಸತ್ಕಾರ ನೀಡಬೇಕು ಎಂದು ಹೇಳಿದರು. ಆದರೆ ಒಬ್ಬ ಅಹ್ಮದಿ ಜಲ್ಸಕ್ಕೆ ಆಗಮಿಸಿದಾಗ ಅವನು ತನ್ನನ್ನು ಅತಿಥಿ ಎಂದೂ ಆತಿಥೇಯನೆಂದೂ ಗಣಿಸಬೇಕಾಗಿದೆ. ಆಗ ಮಾತ್ರ ತ್ಯಾಗ ಮತ್ತು ಬಲಿದಾನದ ಭಾವನೆ ವರ್ಧಿಸುವುದು. ಜಲ್ಸದ ಪರಿಸರ ಶಾಂತಿಭರಿತವೂ ಪ್ರೀತಿ ಮತ್ತು ಭ್ರಾತೃಭಾವನೆಯುಳ್ಳದ್ದೂ ಆಗುವುದು. ಅತಿಥಿ ಯಾವಾಗಲೂ ಪ್ರಯತ್ನ ಮಾಡಬೇಕಾದುದು ಏನೆಂದರೆ ಅವನು ಮನೆಯವರಿಗೆ ಕಷ್ಟವುಂಟು ಮಾಡಬಾರದು. ಅವನು ಅವರಿಗೆ ಸಂತೋಷ ಒದಗಿಸುವವನಾಗಬೇಕು. ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರು ಸಹ ಇದನ್ನೇ ಹೇಳಿದ್ದಾರೆ.

ಜಲ್ಸದ ದಿನಗಳಲ್ಲಿ ಇಲ್ಲಿ ವಾಸ್ತವ್ಯಕ್ಕಾಗಿ ತಾತ್ಕಾಲಿಕ ವ್ಯವಸ್ಥೆ ಮಾತ್ರ ಮಾಡಲಾಗಿರುವುದರಿಂದ ಸ್ಥಿರವಾಗಿರುವ ವ್ಯವಸ್ಥೆಯ ಮೂಲಕ ನೀಡಬಹುದಾದ ಸುಖ ಸೌಲಭ್ಯಗಳನ್ನು ನೀಡಲು ಸಾಧ್ಯವಾಗಲಾರದು. ಈ ವ್ಯವಸ್ಥೆಗಳಲ್ಲಿ ಅನೇಕ ಕುಂದು ಕೊರತೆಗಳು ಇರಬಹುದು. ಜಲ್ಸಕ್ಕೆ ಆಗಮಿಸುವ ಅತಿಥಿಗಳಿಗೆ ಜಮಾಅತಿನ ಅತಿಥಿ ಸತ್ಕಾರ ವ್ಯವಸ್ಥೆಯ ವಿಭಾಗಗಳು ಅವರ ಮನೆಯವರ ಸ್ಥಾನದಲ್ಲಿದ್ದಾರೆ. ಆದುದರಿಂದ ಈ ವಿಭಾಗಗಳನ್ನು ನಮ್ಮ ಸೇವೆಗೆ ನೇಮಿಸಲಾದ ವಿಭಾಗಗಳು ಎಂದು ಪರಿಗಣಿಸಿ ಅವರಲ್ಲಿ ಏನಾದರೂ ಕುಂದುಕೊರತೆ ಕಂಡು ಬಂದರೆ ನಾವು ನಮಗೆ ಇಷ್ಟವಿರುವ ರೀತಿ ಅವರೊಂದಿಗೆ ಮಾತನಾಡಿ ಅವರಿಂದ ಸೌಲಭ್ಯಗಳನ್ನು ಪಡೆಯಲು ಪ್ರಯತ್ನಿಸುವೆವು ಎಂಬ ಯೋಚನೆ ತಪ್ಪಾಗಿದೆ. ಕಾರ್ಯಕರ್ತರಾದ ಈ ಸೇವಕರು ಮತ್ತು ಸೇವಕಿಯರು ನಮ್ಮ ನೌಕರರೇನೂ ಅಲ್ಲ. ಅವರ ವಿನಯ ಮತ್ತು ಸೇವಾ ಮನೋಭಾವದ ಕಾರಣದಿಂದ ಅವರು ತಮ್ಮನ್ನು ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳ ಸೇವೆಗೆ ತಮ್ಮನ್ನು ಅರ್ಪಿಸಿದ್ದಾರೆ. ಅವರಲ್ಲಿ ಕೆಲವರು ಬಹಳ ಉನ್ನತ ವಿದ್ಯಾಭ್ಯಾಸ ಗಳಿಸಿದವರೂ ಉನ್ನತ ಪದವಿಯಲ್ಲಿರುವವರೂ ಆಗಿದ್ದಾರೆ. ಆದುದರಿಂದ ಅತಿಥಿಗಳು ಕಾರ್ಯಕರ್ತರೊಂದಿಗೆ ತಮ್ಮ ಆವಶ್ಯಕತೆಗಳನ್ನು ಮೃದುವಾಗಿಯೂ ಸ್ನೇಹಭರಿತರಾಗಿಯೂ ಕೇಳಬೇಕು. ಕಾರ್ಯಕರ್ತರು ಅತಿಥಿಗಳ ಬೇಡಿಕೆ ಈಡೇರಿಸಲು ತಮ್ಮ ಅಸಹಾಯಕತೆಯನ್ನು ಸೂಚಿಸಿದರೆ ಅದನ್ನು ಸಂತೋಷದಿಂದ ಅಂಗೀಕರಿಸಬೇಕು.

ಇಲ್ಲಿಗೆ ಆಗಮಿಸುವ ಪ್ರತಿಯೊಬ್ಬ ಅಹ್ಮದಿ ತನ್ನನ್ನು ಕೇವಲ ಅತಿಥಿ ಎಂದು ಪರಿಗಣಿಸದೆ ನಾನು ಹೇಳಿದ ಹಾಗೆ ಈ ಜಲ್ಸದಿಂದ ಅದರ ಮೂಲಭೂತ ಉದ್ದೇಶ ಗಳಿಸಲು ಪ್ರಯತ್ನಿಸಿ ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಪ್ರಾರ್ಥನೆಗಳಿಗೆ ವಾರೀಸುದಾರರಾಗಲು ಮತ್ತು ಜಲ್ಸದಿಂದ ಅನುಗ್ರಹ ಗಳಿಸಲು ಪ್ರಯತ್ನಿಸಬೇಕು. ಅವರು ತಮ್ಮ ಆಧ್ಯಾತ್ಮಿಕತೆಯಲ್ಲಿ ಅಭಿವೃದ್ಧಿ ಪಡೆಯಬೇಕು. ಚಿಕ್ಕಪುಟ್ಟ ಲೌಕಿಕ ಅನುಕೂಲತೆಗಳನ್ನು ಪಡೆಯುವ ಬಗ್ಗೆ ಮಾತನಾಡುತ್ತಾ ತಮ್ಮ ಸಮಯಯನ್ನು ವ್ಯರ್ಥಗೊಳಿಸಬಾರದು. ಆ ಮೂಲಕ ಪರಿಸರವನ್ನು ಕೆಡಿಸಬಾರದು. ಈ ಸಂದರ್ಭದಲ್ಲಿ ನಾನು ಕಾರ್ಯಕರ್ತರೊಂದಿಗೆ ಪುನಃ ಹೇಳಲು ಬಯಸುತ್ತೇನೆ, ಪರಿಸ್ಥಿತಿ ಹೇಗಿದ್ದರೂ ನೀವು ಯಾವಾಗಲೂ ಸುಸ್ವಭಾವವನ್ನೂ ಆತ್ಮಸ್ಥೈರ್ಯವನ್ನೂ ಪ್ರಕಟಿಸಬೇಕು.

ಈ ಮೂರು ದಿನಗಳಲ್ಲಿ ಅತಿಥಿಗಳಿಗೆ ಆಹಾರವಾಗಿ ಏನು ದೊರೆತರೂ ಅದನ್ನು ಅವರು ಸಂತೋಷದಿಂದ ಭಕ್ಷಿಸಬೇಕು. ನೋಡಿರಿ, ಕೆಲವು ಕಾರ್ಯಕರ್ತರು ಕೆಲವು ಸರಕಾರಿ ವಿಭಾಗಗಳಲ್ಲಿ ಉನ್ನತ ಅಧಿಕಾರಿಗಳಾಗಿದ್ದಾರೆ. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಅತಿಥಿಗಳಿಗೆ ಸೇವೆ ಮಾಡುವುದರಿಂದ ಅನುಗ್ರಹ ಸಿಗುತ್ತದೆ ಎಂಬ ಭಾವನೆಯಿಂದ ಅವರು ರಜೆ ಪಡೆದುಕೊಂಡು ಉತ್ಸಾಹಭರಿತರಾಗಿ ಆಹಾರ ಬೇಯಿಸುವ ಕೆಲಸ ಮತ್ತು ಇತರ ಕೆಲಸಗಳನ್ನು ಮಾಡುತ್ತಾರೆ. ಆದುದರಿಂದ ಆಹಾರದ ರುಚಿಯಲ್ಲಿ ಹೆಚ್ಚು ಕಡಿಮೆ ಇದ್ದರೆ ದೂರುವ ಆವಶ್ಯಕತೆ ಇರುವುದಿಲ್ಲ. ಆಹಾರ ಸರಬರಾಜು ಮಾಡುವ ಕಾರ್ಯಕರ್ತರು ಸಹ ನೆನಪಿಡಬೇಕಾದುದೇನೆಂದರೆ ಅವರು ಜನರಿಗೆ ಆಹಾರ ನೀಡುವಾಗ ಗೌರವ ಭಾವನೆಯಿಂದ ನೀಡಬೇಕು. ಒಬ್ಬನು ಹತ್ತು ಸಾರಿ ಸಾರು ಕೇಳಿದರೂ, ತನಗೆ ಇಷ್ಟವಿರುವ ಸಾರು ಆವಶ್ಯಪಟ್ಟರೂ ಅದನ್ನು ಅವರಿಗೆ ಕೊಡಿರಿ. ಕೆಲವು ಸಾರಿ ಊಟ ಮಾಡುವ ಸ್ಥಳದಲ್ಲಿ ಚಿಕ್ಕ ಚಿಕ್ಕ ವಿಷಯಗಳ ಬಗ್ಗೆ ವಿವಾದವುಂಟಾಗುತ್ತದೆ. ಹೀಗೆ ಸಂಭವಿಸದಂತೆ ನೋಡಿಕೊಳ್ಳಬೇಕಾಗಿದೆ.

ಅತಿಥಿಗಳಿಗೆ ಸ್ನಾನ ಗೃಹ ಮೊದಲಾದುವುಗಳ ಉತ್ತಮ ವ್ಯವಸ್ಥೆ ಮಾಡಲು ಪ್ರಯತ್ನಿಸಲಾಗಿದೆ. ಆದರೆ ಇಲ್ಲಿರುವ ವ್ಯವಸ್ಥೆ ತಾತ್ಕಾಲಿಕವಾಗಿರುವುದರಿಂದ ಅತಿಥಿಗಳಿಗೆ ಕಷ್ಟವಾಗಬಹುದು. ಅದಕ್ಕೆ ಅವರು ಹೊಂದಿಕೊಳ್ಳಬೇಕು. ನನಗೆ ಕಳೆದ ರಾತ್ರಿ ವಿವರ ಲಭಿಸಿತು: ಸ್ನಾನಗೃಹಗಳ ಒಂದು ಭಾಗದ ಡ್ರೈನ್ ಪೈಪ್ ಮುರಿದುಹೋದ ಕಾರಣ ಗಟರ್ ಬ್ಲಾಕ್ ಆಗಿದೆ, ಸ್ವಲ್ಪ ಸಮಯ ಇದನ್ನು ಬಂದ್ ಮಾಡಲಾಯಿತು ಎಂದು. ನಮ್ಮ ಜಲ್ಸದ ಆಡಳಿತೆ ಇದಕ್ಕೆ ಶಾಶ್ವತ ಪರಿಹಾರ ಕಂಡುಹಿಡಿಯಲು ಪ್ರಯತ್ನಿಸುತ್ತಿದೆ. ಆದರೂ ಅತಿಥಿಗಳಿಗೆ ಇನ್ನಷ್ಟು ಕಷ್ಟವಾಗಬಹುದು. ಕಳೆದ ವಾರದ ಖುತ್‌ಬದಲ್ಲಿ ನಾನು ಹೇಳಿದ ಹಾಗೆ ಟ್ರಾನ್ಸ್‌ಪೋರ್ಟ್ ಮತ್ತು ಪಾರ್ಕಿಂಗ್ ಬಗ್ಗೆ ಅನುಕೂಲಕರ ಬದಲಾವಣೆ ಮಾಡಲಾಗಿದೆ. ನನಗೆ ಇಷ್ಟರವರೆಗೆ ದೊರೆತ ವರದಿ ಪ್ರಕಾರ ಹೊಸ ವ್ಯವಸ್ಥೆಯಿಂದ ಪ್ರಯೋಜನವಾಗಿದೆ. ಟ್ರಾಫಿಕ್ ಜ್ಯಾಮ್ ಕಡಿಮೆಯಾಗಿದೆ. ಜಲ್ಸಕ್ಕೆ ಆಗಮಿಸುವವರು ಟ್ರಾಫಿಕ್ ಮತ್ತು ಪಾರ್ಕಿಂಗ್ ವಿಭಾಗದವರೊಂದಿಗೆ ಸಹಕರಿಸಬೇಕು. ಹಿಂದೆ ಜುಮುಅದ ಸಮಯ ಜನರು ತಡವಾಗಿ ಬರುತ್ತಿದ್ದರು. ಕೊನೆಯ ಸಮಯ ತನಕ ಆಗಮಿಸುತ್ತಾ ಇದ್ದರು. ನನ್ನೊಂದಿಗೆ 'ಸ್ವಲ್ಪ ತಡಮಾಡಿ ಬನ್ನಿರಿ' ಎಂದು ಹೇಳಲಾಗುತ್ತಿತ್ತು. ಆದರೆ ಈ ಸಾರಿ ಒಳ್ಳೆಯ ವ್ಯವಸ್ಥೆ ಮಾಡಲಾಗಿದೆ ಎಂದು ತೋರುತ್ತದೆ. ಇನ್ನುಮುಂದೆ ಸಹ ಜನರು ಸಹಕಾರ ನೀಡಿದರೆ ಈ ವ್ಯವಸ್ಥೆ

ಜಾರಿಯಲ್ಲಿರುವುದು. ಹಾಗೆ ಮಾಡದಿದ್ದರೆ ಹೆಚ್ಚು ಸಮಯ ಬೇಕಾಗಬಹುದು. ಆದುದರಿಂದ ನಾನು ಮೊದಲು ಹೇಳಿದ ಹಾಗೆ ಬೇಗನೆ ಮನೆಗಳಿಂದ ಹೊರಡಿರಿ. ಆಗ ಪಾರ್ಕಿಂಗ್ ಮಾಡಲು ಮತ್ತು ಬಸ್‌ಗಳಲ್ಲಿ ಜಲ್ಸಗಾಹ್‌ಗೆ ಬರಲು ಸುಲಭವಾಗುವುದು.

ಭದ್ರತೆಯ(ಸೆಕ್ಯುರಿಟಿಯ) ಸಮಸ್ಯೆಗಳು ಪ್ರತಿ ವರ್ಷ ವರ್ಧಿಸುತ್ತಿವೆ. ಆದುದರಿಂದ ಸೆಕ್ಯುರಿಟಿ ಚೆಕ್ಕಿಂಗ್ ಬಗ್ಗೆ ಸಹಕಾರ ನೀಡಿರಿ. ಎಮ್ ಕಾರ್ಡ್ ಮತ್ತು ಅದಿಲ್ಲದಿದ್ದರೆ ಬೇರೆ ಐಡೆಂಟಿಟಿ ಕಾರ್ಡ್ ಆವಶ್ಯಕವಾಗಿದೆ. ಅಥವಾ ಪರಿಚಯ ನೀಡುವ ಪತ್ರವಿರಬೇಕು. ಎಷ್ಟು ಸಾರಿ ಆವಶ್ಯಪಟ್ಟರೂ ಅವುಗಳನ್ನು ತೋರಿಸಬೇಕು. ನಿಮ್ಮ ಕಾರ್ಡ್ ಅಥವಾ ವಿಶಿಷ್ಟ ಸ್ಥಳದ ಪಾಸ್‌ಗಳನ್ನು ಇತರ ಯಾರಿಗೂ ಕೊಡಬಾರದು. ಗ್ರೀನ್ ಏರಿಯಾದ ಕಾರ್ಡ್ ಕೆಲವರು ಬೇರೆಯವರಿಗೆ ಕೊಡುತ್ತಾರೆ. ಅಥವಾ ಒಂದು ಸ್ಥಳಕ್ಕೆ ಹೋಗಲು ಇರುವ ಅನುಮತಿ ಪತ್ರ ಬೇರೆಯವರಿಗೆ ಕೊಡುತ್ತಾರೆ. ಹಾಗೆ ಮಾಡಬಾರದು. ಕಳೆದ ವರ್ಷ ಇಂತಹ ಘಟನೆಗಳು ನಡೆದಿವೆ. ದೊಡ್ಡ ಹುದ್ದೇದಾರರು ಸಹ ಹೀಗೆ ಮಾಡುತ್ತಾರೆ. ಆದುದರಿಂದ ಬಹಳ ಜಾಗರೂಕತೆ ಆವಶ್ಯಕವಾಗಿದೆ. ಯಾರಿಗಾದರೂ ಎರಡು ಕಾರ್ಡ್‌ಗಳು ನೀಡಲ್ಪಟ್ಟಿದ್ದರೆ ಅವುಗಳನ್ನು ತಪಾಸಣೆ ಮಾಡಿ ಅವೆರಡರಲ್ಲಿಯೂ ಒಂದೇ ಹೆಸರಿದೆಯೇ ಎಂದು ನೋಡಿರಿ. ತಮ್ಮೊಂದಿಗೆ ನೀರಿನ ಬಾಟಲಿ ತರುವವರನ್ನು ತಡೆಯಿರಿ. ಇದು ಸರಕಾರದ ಆದೇಶ ಪ್ರಕಾರವಾಗಿದೆ. ಇವುಗಳೆಲ್ಲ ಭದ್ರತೆಗೆ ಇರುವ ಕಾರ್ಯಗಳಾಗಿವೆ. ಆದುದರಿಂದ ಎಲ್ಲರೂ ಸಹಕರಿಸಬೇಕಾದುದು ಅತ್ಯಗತ್ಯವಾಗಿದೆ.

ಚೆಕ್ಕಿಂಗ್ ಮಾಡುವವರು ಪ್ರತಿಯೊಬ್ಬನ ತಪಾಸಣೆ ಮಾಡಬೇಕು. ಪರಿಚಯವಿರುವವರನ್ನೂ ಪರಿಚಯವಿಲ್ಲದವರನ್ನೂ ಕಾರ್ಯಕರ್ತರನ್ನೂ ಕಾರ್ಯಕರ್ತರಲ್ಲದವರನ್ನೂ ಹುದ್ದೇದಾರನ್ನೂ ಹುದ್ದೇದಾರರಲ್ಲದವರನ್ನೂ ಪ್ರತಿಯೊಬ್ಬರನ್ನೂ ತಪಾಸಣೆ ಮಾಡಬೇಕು. ಇದರ ಬಗ್ಗೆ ಯಾರೂ ಕೆಟ್ಟ ಭಾವನೆ ಹೊಂದಬೇಕಾದ ಆವಶ್ಯಕತೆಯಿಲ್ಲ. ಚೆಕ್ಕಿಂಗ್‌ನವರು ಸಹ ತಪಾಸಣೆ ಮಾಡಲು ಸಂಕೋಚಪಡಬೇಕಾದ ಆವಶ್ಯಕತೆಯಿಲ್ಲ. ತಪಾಸಣೆಗೆ ತಮ್ಮನ್ನು ಒಳಪಡಿಸಲು ಹಿಂಜರಿಯುವವರು ನಾಚಿಕೆ ಪಡಬೇಕಾಗಿದೆ. ಅದೇ ರೀತಿ ಪ್ರತಿಯೊಬ್ಬನು ತನ್ನ ಎಡಬಲಗಳ ಕಡೆಗೆ ಗಮನವಿರಿಸಬೇಕು. ತಾನಿರುವ ಪರಿಸರದ ಬಗ್ಗೆ ಶ್ರದ್ಧೆ ವಹಿಸಬೇಕು. ನಾನು ಹಿಂದೆ ಸಹ ಹೇಳಿದ ಹಾಗೆ ಈ ದಿನಗಳಲ್ಲಿ ಪ್ರಾರ್ಥನೆ ಬಗ್ಗೆ ಹೆಚ್ಚು ಶ್ರದ್ಧೆ ನೀಡಬೇಕು. ಅಲ್ಲಾಹನು ಈ ಜಲ್ಸವನ್ನು ಪ್ರತಿಯೊಂದು ರೀತಿಯಲ್ಲಿ ಅನುಗ್ರಹಭರಿತವನ್ನಾಗಿ ಮಾಡಲಿ.

ಜಲ್ಸದ ಕಾರ್ಯಕ್ರಮಗಳನ್ನು ಆಲಿಸಿರಿ. ಅತ್ತಿತ್ತ ತಿರುಗಾಡಬೇಡಿರಿ. ನಾನು ಇದರ ಮೊದಲು ಹಲವು ಸಾರಿ ಹೇಳಿದ ಹಾಗೆ, ಜಲ್ಸದ ಆಡಳಿತೆ ವ್ಯವಸ್ಥೆ ಜನರ ಸುಖ ಸೌಲಭ್ಯಗಳ ಕಡೆಗೆ ಹೆಚ್ಚು ಗಮನ ಹರಿಸಬೇಕು. ಕೆಲವು ಜನರು ಮನೆಯಲ್ಲಿ ತಿಂಡಿ ತಿನ್ನದೆ ಬೇಗನೆ ಬರುತ್ತಾರೆ. ಕೆಲವರಿಗೆ ಬೆಳಗ್ಗೆ ಬೇಗನೆ ತಿಂಡಿ ತಿನ್ನುವ ಅಭ್ಯಾಸವಿರುವುದಿಲ್ಲ. ಇಂತಹ ಜನರಿಗೆ ಆಹಾರ ಸರಬರಾಜು ಮಾಡಲು ತಡವಾಗುವಾಗ ಅವರಿಗೆ ತುಂಬಾ ಕಷ್ಟವಾಗುತ್ತದೆ. ಕೆಲವು ರೋಗಿಗಳಿಗೆ ಹೆಚ್ಚು ಕಾಲ ಹಸಿದಿರಲು ಆಗುವುದಿಲ್ಲ. ಇಂತಹ ಜನರಿಗೆ ಭೋಜನ ಶಾಲೆಯಲ್ಲಿ ಯಾವುದಾದರೂ ಪ್ರತ್ಯೇಕ ವ್ಯವಸ್ಥೆ ಇರಬೇಕು. ಅಲ್ಲಿ ಅವರ ಉಪಚಾರಕ್ಕೆ ಕಾರ್ಯಕರ್ತರು ಸಹ ಇರಬೇಕು. ಇಂತಹ ಜನರು ಬೇಗನೆ ತಿಂಡಿ ತಿಂದು ಮರಳಿ ಬರಬೇಕು. ಮತ್ತು ಜಲ್ಸದ ಕಾರ್ಯಕ್ರಮಗಳನ್ನು ಆಲಿಸಬೇಕು.

ಅದೇ ರೀತಿ ಎಲ್ಲಾ ಸ್ಟಾಲ್‌ಗಳು ಜಲ್ಸದ ಕಾರ್ಯಕ್ರಮದ ಸಮಯದಲ್ಲಿ ಮುಚ್ಚಿರಬೇಕೆಂದು ಆಡಳಿತೆ ವ್ಯವಸ್ಥೆ ನಿಗಾವಹಿಸಬೇಕು. ಸ್ಟಾಲ್‌ನಲ್ಲಿ ಅಥವಾ ಅಂಗಡಿಯಲ್ಲಿ ಯಾರೂ ಮಾರಾಟಗಾರರು ಇರಬಾರದು. ಎಲ್ಲರೂ ಜಲ್ಸ ಕಾರ್ಯಕ್ರಮಗಳನ್ನು ಆಲಿಸಬೇಕು. ಅಲ್ಲಿ ಸಹ ಸೆಕ್ಯುರಿಟಿ ವ್ಯವಸ್ಥೆ ಇರಬೇಕು. ಬಜಾರು ವಿಭಾಗದವರು ಇದರ ವ್ಯವಸ್ಥೆ ಮಾಡಬೇಕು. ಆದರೆ ಯಾರಿಗಾದರೂ ತಮ್ಮ ಸರಕುಗಳ ಭದ್ರತೆ ಬಗ್ಗೆ ಸಮಾಧಾನವಿಲ್ಲದಿದ್ದರೆ ಅಥವಾ ಬೆಲೆಬಾಳುವ ಸಾಮಗ್ರಿಗಳು ಇದ್ದಲ್ಲಿ ಅವರು ಅಂಗಡಿಯಲ್ಲಿ ಕುಳಿತಿರದೆ ಅಲ್ಲಿಯೇ ಒಂದು ಪ್ರತ್ಯೇಕ ಸ್ಥಳದ ವ್ಯವಸ್ಥೆ ಮಾಡಿ ಟಿ.ವಿ. ಮೂಲಕ ಜಲ್ಸದ ಕಾರ್ಯಕ್ರಮ ಆಲಿಸಬೇಕು.

ಈ ವರ್ಷ ಸಹ ಎಕ್ಸಿಬಿಷನ್‌ಗಳನ್ನು ಏರ್ಪಡಿಸಲಾಗಿದೆ. ರಿವ್ಯೂ ಆಫ್ ರಿಲೀಜಿಯನ್ಸ್ ಎಕ್ಸಿಬಿಷನ್ ಮತ್ತು ಯೇಸು ಮಸೀಹರ ಶವ ವಸ್ತ್ರದ ಬಗ್ಗೆ ಸಹ ಎಕ್ಸಿಬಿಷನ್ ಇದೆ. ಇದರ ಬಗ್ಗೆ ಭಾಷಣ ಮಾಡಲು ಮುಸ್ಲಿಮೇತರ ವಿದ್ವಾಂಸರು ಸಹ ಆಗಮಿಸುತ್ತಿದ್ದಾರೆ. ಅದರ ಬಗ್ಗೆ ಆಸಕ್ತಿ ಇರುವವರು ಅದರ ಲಾಭ ಪಡೆಯಬಹುದಾಗಿದೆ. ರಿವ್ಯೂ ಆಫ್ ರಿಲೀಜಿಯನ್ಸ್ ಅಧೀನದಲ್ಲಿ ಪವಿತ್ರ ಖುರ್‌ಆನಿನ ವಚನ ಬರೆಯುವ ಸ್ಪರ್ಧೆ ಈ ವರ್ಷ ಸಹ ಜರಗಿಸಲಾಗುತ್ತಿದೆ. ಅಲ್ ಖಲಮ್ ಎಂಬ ಹೆಸರಿನ ಈ ಕಾರ್ಯಕ್ರಮದಲ್ಲಿ ಅನೇಕರು ಭಾಗವಹಿಸುತ್ತಾರೆ. ಆರ್‌ಖಿವ್ಸ್ ವಿಭಾಗದ ಅಧೀನದಲ್ಲಿ ಕೆಲವು ತಬರ್ರುಕಾತ್‌ಗಳ ಪ್ರದರ್ಶನ ನಡೆಯುತ್ತದೆ. ಅವುಗಳು ಸಹ ನೋಡಬಹುದಾದ ವಸ್ತುಗಳಾಗಿವೆ. ಮಖ್‌ಝುನೆ ತಸಾವೀರ್ ಎಂಬ ಫೋಟೋಗಳ ಪ್ರದರ್ಶನ ಸಹ ಇದೆ. ಅದನ್ನು ಸಹ ನೋಡಬಹುದಾಗಿದೆ. ಆದರೆ ಜಲ್ಸದ ಕಾರ್ಯಕ್ರಮಗಳು ಜರಗುತ್ತಿರುವಾಗ ಇವುಗಳೆಲ್ಲ ಮುಚ್ಚಿರುತ್ತವೆ. ಜಲ್ಸದ ಕಾರ್ಯಕ್ರಮಗಳನ್ನು ಎಲ್ಲರೂ ಶ್ರದ್ಧೆ ವಹಿಸಿ ಆಲಿಸಿರಿ. ಅವುಗಳಿಂದ ಪೂರ್ಣವಾಗಿ ಪ್ರಯೋಜನ ಪಡೆಯಿರಿ. ಅಹ್ಮದಿ ವಿದ್ವಾಂಸರು ಬಹಳ ಕಷ್ಟಪಟ್ಟು ತಮ್ಮ ಭಾಷಣ ಸಿದ್ಧಪಡಿಸುತ್ತಾರೆ. ಅವುಗಳಿಂದ ಧಾರಾಳ ಲಾಭಗಳಿಸಲು ಪ್ರಯತ್ನಿಸಿರಿ. ನೀವು ನಿಮಗೆ ಇಷ್ಟವಿರುವವರ ಭಾಷಣ ಮತ್ತು ನಿಮಗೆ ಇಷ್ಟವಿರುವ ವಿಷಯದ ಬಗ್ಗೆ ಭಾಷಣಗಳನ್ನು ಮಾತ್ರ ಆಲಿಸಿ ಇತರ ಭಾಷಣಗಳನ್ನು ಕಡೆಗಣಿಸಬಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಹೇಳುತ್ತಾರೆ: ಎಲ್ಲ ಜನರು ಭಾಷಣಗಳನ್ನು ಶ್ರದ್ಧೆಯಿಂದ ಆಲಿಸಬೇಕು. ನಾನು ನನ್ನ ಜಮಾಅತ್ ಬಗ್ಗೆ ಮತ್ತು ಸ್ವತಃ ನನ್ನ ಬಗ್ಗೆ ಇಚ್ಛಿಸುವುದೇನೆಂದರೆ ಭಾಷಣಗಾರರ ವಾಕ್ಚಾತುರ್ಯವನ್ನು ಮಾತ್ರ ಇಷ್ಟಪಡುವವರಾಗಬಾರದು.

ಭಾಷಣಗಾರ ಜಾಲವಿದ್ಯೆಯ ಹಾಗೆ ಭಾಷಣ ಮಾಡುತ್ತಾನೆ, ಅವನು ಬಳಸುವ ಶಬ್ದಗಳಲ್ಲಿ ಎಂತಹ ಚಮತ್ಕಾರವಿದೆ ಎಂದೆಲ್ಲ ಹೇಳುವುದನ್ನು ನಾನು ಇಷ್ಟಪಡುವುದಿಲ್ಲ. ನಾನು ಅತಿಶಯೋಕ್ತಿಗಳನ್ನು ಇಷ್ಟಪಡುವುದಿಲ್ಲ. ನನ್ನ ಪ್ರಕೃತಿ ಬಯಸುವುದೇನೆಂದರೆ ಎಲ್ಲ ಕೆಲಸ ಅಲ್ಲಾಹನಿಗೋಸ್ಕರ ಮಾಡಬೇಕು. ನಾವು ಹೇಳುವುದೆಲ್ಲಾ ಅಲ್ಲಾಹನಿಗೋಸ್ಕರವಾಗಿರಬೇಕು. ನಾವು ಹೇಳುವುದೆಲ್ಲಾ ಅಲ್ಲಾಹನ ಸಂಪ್ರೀತಿ ಪಡೆಯಲಿಕ್ಕೋಸ್ಕರವಾಗಿರಬೇಕು. ನಾವು ಅಲ್ಲಾಹನ ವಚನಗಳನ್ನು ಅವುಗಳನ್ನು ಅನುಷ್ಠಾನಕ್ಕೆ ತರಲು ಆಲಿಸಬೇಕು. ನಾವು ಒಂದು ಪ್ರವಚನ ಆಲಿಸಿ ಈ ದಿನ ಬಹಳ ಉತ್ತಮ ಪ್ರವಚನ ಆಲಿಸಿದೆವು ಎಂದು ಹೇಳಿದರೆ ಸಾಕಾಗಲಾರದು. ಪ್ರವಚನಗಳನ್ನು ಆಲಿಸಿ ಅನುಷ್ಠಾನಕ್ಕೆ ತನ್ನಿರಿ. ಪ್ರವಚನದ ಬಗ್ಗೆ ಹೊಗಳಬೇಕು ಎಂಬ ಸಂಕಲ್ಪದಿಂದ ಮಾತ್ರ ಆಲಿಸಬಾರದು.

ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮ್ ಪುನಃ ಹೇಳುತ್ತಾರೆ: ಮುಸ್ಲಿಮರ ಅವನತಿಗೆ ಒಂದು ಬಹಳ ದೊಡ್ಡ ಕಾರಣ ಇದೇ ಆಗಿದೆ. ಅವರು ಭಾಷಣಗಳನ್ನು ಆಲಿಸುವುದು ಅವುಗಳ ಉಪದೇಶಗಳನ್ನು ಅನುಷ್ಠಾನಕ್ಕೆ ತರಬೇಕು ಎಂಬ ಸಂಕಲ್ಪದಿಂದಲ್ಲ. ಬಹಳ ದೊಡ್ಡ ಸಭೆಗಳು ಜರಗುತ್ತವೆ. ಅವರ ಸಂಸ್ಥೆಗಳು ಸ್ಥಾಪಿತವಾಗಿರುತ್ತವೆ. ಅವರ ಸಭೆಗಳಲ್ಲಿ ವಾಗ್ಮಿಗಳಾದ ಭಾಷಣಗಾರರು ತಮ್ಮ ಭಾಷಣ ಮಾಡುತ್ತಾರೆ. ಅವರ ಕವಿಗಳು ಸಮುದಾಯದ ಸ್ಥಿತಿ ಬಗ್ಗೆ ವಿಲಾಪ ಗೀತೆ ಹಾಡುತ್ತಾರೆ. ಆದರೆ ಅವುಗಳು ಸಮುದಾಯದ ಮೇಲೆ ಯಾವ ಪ್ರಭಾವವನ್ನೂ ಬೀರುವುದಿಲ್ಲ. ಮುಸ್ಲಿಮ್ ಸಮುದಾಯ ಅಭಿವೃದ್ಧಿಗೆ ಬದಲಾಗಿ ಅಧಃಪತನದ ಕಡೆಗೆ ಸಾಗುತ್ತಿದೆ. ನಾವು ಇದನ್ನೇ ಕಾಣುತ್ತಿದ್ದೆವು. ಈಗ ಸಹ ನಾವು ಅದನ್ನೆಯೇ ಕಾಣುತ್ತಿದ್ದೇವೆ. ಈಗ ಬಹಳ ಭಯಾನಕ ಸ್ಥಿತಿ ಜಾರಿಯಲ್ಲಿದೆ. ಇದಕ್ಕೆ ಕಾರಣವೇನೆಂದರೆ ಅವರ ಸಭೆಗಳಿಗೆ ಆಗಮಿಸುವವರು ನಿಷ್ಠಾವಂತರಾಗಿರುವುದಿಲ್ಲ.

ಒಟ್ಟಿನಲ್ಲಿ, ಜಲ್ಸದಲ್ಲಿ ಭಾಗವಹಿಸುವ ಪ್ರತಿಯೊಬ್ಬರೂ ಈ ಮೂಲಭೂತ ಆವಶ್ಯಕತೆಯನ್ನು ಈಡೇರಿಸಬೇಕು. ಅವರು ನಿಷ್ಠೆಯಿಂದ ಜಲ್ಸದ ಕಾರ್ಯಕ್ರಮಗಳನ್ನು ಆಲಿಸಬೇಕು. ನಮಗೆ ಸಾಧ್ಯವಿರುವಷ್ಟು ಮಟ್ಟಿಗೆ ಭಾಷಣಗಳ ಉಪದೇಶಗಳನ್ನು ನಾವು ಅನುಷ್ಠಾನಕ್ಕೆ ತರುವೆವು ಎಂಬ ಸಂಕಲ್ಪ ಹೊಂದಿ ಭಾಷಣಗಳನ್ನು ಆಲಿಸಬೇಕು.

ಅಹ್ಮದಿ ವಿದ್ವಾಂಸರಿಗೆ ಅಲ್ಲಾಹನು ಬಹಳ ಅನುಗ್ರಹ ನೀಡಿರುವನು. ಹಝ್ರತ್ ಮಸೀಹ್ ಮೌಊದ್ ಅಲೈಹಿಸ್ಸಲಾಮರ ಜ್ಞಾನಭರಿತ ನುಡಿಗಳ ಲಾಭ ಅವರು ಪಡೆದಿರುವರು. ಅವರು ಅಲ್ಲಾಹನ ವಚನಗಳಿಂದಲೂ ಅಲ್ಲಾಹನ ಸಂದೇಶವಾಹಕರ ನುಡಿಗಳಿಂದಲೂ ಲಾಭ ಗಳಿಸಿ ಅದನ್ನು ಅವರು ನಮಗೆ ತಲಪಿಸುತ್ತಾರೆ. ಅವರು ಆಧ್ಯಾತ್ಮಿಕತೆಯ ಬಗ್ಗೆ ಜ್ಞಾನವರ್ಧಕ ಭಾಷಣ ಮಾಡುತ್ತಾರೆ. ನಾವು ಅವುಗಳಿಂದ ಲಾಭ ಪಡೆಯಲು ಪ್ರಯತ್ನಿಸುವುದಾದರೆ ನಮ್ಮ ಜೀವನದಲ್ಲಿ ಒಂದು ಕ್ರಾಂತಿಯನ್ನುಂಟು ಮಾಡಬಹುದು. ಜಲ್ಸದಲ್ಲಿ ಭಾಗವಹಿಸುವ ಎಲ್ಲರಿಗೂ ಅಲ್ಲಾಹನು ಈ ಭಾಗ್ಯವನ್ನು ದಯಪಾಲಿಸಲಿ – ಆಮೀನ್.

———*****———


***Friday Sermon delivered by Hadrath Khaleefatul Masih Al Khamis*** *(atba)*

*At, Hadeeqatul Mahdi, London. on 28-07-2017.*

**Summarized by** *Majlis Ansarullah Bharat*

***Kannada Translation:*** M. Ubeidullah for Kannada Desk, Qadian

***Reviewed by:*** M.P Ibrahim | ***Typing:*** U Basheer Ahmad

***Published By:*** Kannada Isha'at Team for Nazarath Nashr-O-Isha'ath, Qadian

***Email***: *khutuba.kannada@gmail.com*

**You can find all the Sermons archived at**: www.alislam.org/friday-sermon